ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾಳಿ

ಸಿ.ಸಿ ನಂಬರ್.624/2025

ಪಿಯಾರ್ದುದಾರರು ಃ- ರಾಜ್ಯ - ನ್ಯಾಮತಿ ಅರಕ್ಷಕ ಠಾಣೆ

ವಿರುದ್ಧ

ಆರೋಪಿಃ- 1. ಅನಿಲ್ ಕುಮಾರ್ ಬಿನ್ ನಾಗರಾಜಪ್ಪ,
25 ವರ್ಷ,
ವಾಸಃ ಅಂಬರಗೊಪ್ಪ ಗ್ರಾಮ,
ಶಿಕಾರಿಪುರ ತಾಲ್ಲೂಕು.

## ಆಪಾದನೆ

ದಿನಾಂಕ 01-11-2024 ರಂದು ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ನ್ಯಾಮತಿ ಪೋಲೀಸ್ ಠಾಣಾ ವ್ಯಾಪ್ತಿಯ, ಆರೋಪಿ ಅನಿಲ್ ಕುಮಾರ್ ಆದ ನೀವು ಕೆಎ-15-ಇಹೆಚ್-5055 ನೊಂದಣಿ ಸಂಖ್ಯೆಯ ಬೈಕನ್ನು ಕುಂಕುವ ಕಡೆಯಿಂದ ಒಡೆಯರ ಹತ್ತೂರು ಗ್ರಾಮದ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವಂತೆ ಚಾಲನೆ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ .ನ್ಯಾ. ಸಂ. ಕಲಂ 281 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿ ಅನಿಲ್ ಕುಮಾರ್ ಆದ ನೀವು ಕೆಎ-15-ಇಹೆಚ್-5055 ನೊಂದಣಿ ಸಂಖ್ಯೆಯ ಬೈಕನ್ನು ಕುಂಕುವ ಕಡೆಯಿಂದ ಒಡೆಯರ ಹತ್ತೂರು ಗ್ರಾಮದ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವಂತೆ ಚಾಲನೆ ಮಾಡಿಕೊಂಡು ಬಂದು ಅದೇ ಮಾರ್ಗದಲ್ಲಿ ಆರೋಪಿ-2 ರವರು ಚಾಲನೆ ಮಾಡಿಕೊಂಡು ಬರುತ್ತಿದ್ದ ಕೆಎ-17-ಇಕ್ಯೂ-0062 ಬೈಕಿಗೆ ಹಿಂದಿನಿಂದ ಡಿಕ್ಕಿಪಡಿಸಿದ ಪರಿಣಾಮ ಅವರ ತಲೆ, ಬಲಗಣ್ಣು, ಎಡಗೆನ್ನೆ, ಹೊಟ್ಟೆಗೆ ಬಲವಾದ ಪೆಟ್ಟುಬಿದ್ದು, ಬಾಯಿ ಹಾಗೂ ಮೂಗಿನಲ್ಲಿ ರಕ್ತ ಸ್ರಾವವಾಗಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಆ ಮೂಲಕ ಆರೋಪಿಯಾದ ನೀವು ಭಾ .ನ್ಯಾ. ಸಂ. ಕಲಂ 106 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

**<u>ಆರೋಪಿ-1 ರವರ ಹೇಳಿಕೆ.</u>**

ಪ್ರಶ್ನೆ 1 :- ನಿಮಗೆ ಮೇಲೆ ತಿಳಿಸಿದ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೇ?

ಉತ್ತರ :-

ಪ್ರಶ್ನೆ 2 **:-** ನೀವು ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

ಉತ್ತರ :-

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿ-1 ರವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.)

ಸ್ಥಳ :- ಹೊನ್ನಾಳಿ
ದಿನಾಂಕ: 17-06-2026

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹೊನ್ನಾಳಿ